

**ಹಾರಕ**

ಭಾರತ ಮೂಲದ ಬೆಳೆ. ದಕ್ಷಿಣ ಅಮೆರಿಕ ಮೂಲದಲ್ಲಿಯೂ ಒಂದು ತಳಿ ಇದೆ. ಕರಲು ಮಣ್ಣು, ಚೌಳು ಮಣ್ಣು, ಪಾಳು ಜಮೀನು, ಕಲ್ಲುಮಿಶ್ರಿತ ಕೆಂಪು ಮಣ್ಣು, ಸಾರವಿಲ್ಲದ ಬಂಜರು ಭೂಮಿಗಳಲ್ಲಿ ಹಾರಕ ಹುಲುಸಾಗಿ ಬೆಳೆಯುತ್ತದೆ. ಕೀಟ ರೋಗಗಳ ಹಾವಳಿಯಿಲ್ಲ. ಹಲವಾರು ವರ್ಷ ಶೇಖರಿಸಿದರೂ ಕೆಡುವುದಿಲ್ಲ. ಕಬ್ಬು, ಬಾಳೆಗೆ ಬೇಕಾದ ನೀರಿನಲ್ಲಿ ಶೇ. 25ರಷ್ಟು ಹಾಗೂ ಭತ್ತಕ್ಕೆ ಬೇಕಾದ ನೀರಿನಲ್ಲಿ ಶೇ. 30ರಷ್ಟು ಇದ್ದರೂ ಸಾಕು ಹಾರಕ ಬೆಳೆಯಬಹುದು. ಬಿತ್ತಿದ ಒಂದು ತಿಂಗಳ ನಂತರ ದನ–ಕುರಿಗಳಿಂದ ಬುಡದವರೆಗೂ ಮೇಯಿಸಬೇಕು. ನಂತರ ಅಚ್ಚರಿಯ ರೀತಿ ಚಿಗುರಿ ಹುಲುಸಾಗಿ ಬೆಳೆದು ತೆಂಡೆ ಹೊಡೆಯುತ್ತದೆ. ಕರ್ನಾಟಕವೂ ಸೇರಿದಂತೆ ಮಧ್ಯ ಪ್ರದೇಶ, ರಾಜಸ್ಥಾನ, ಉತ್ತರಪ್ರದೇಶ, ತಮಿಳುನಾಡು, ಪಶ್ಚಿಮ ಬಂಗಾಳ, ತೆಲಂಗಾಣ, ಒಡಿಶಾ, ಬಿಹಾರ, ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲಿ ಬೆಳೆಯುತ್ತದೆ.

ಆರಂಭಿಸಿದ್ದು ಹೆಣ್ಣುಮಕ್ಕಳು, ಎರಡು– ಕೃಷಿ ಆರಂಭವಾಗಿದ್ದು ಸಿರಿಧಾನ್ಯಗಳಿಂದ.

ಹೀಗೆ ಕಾಡು ಕಳೆಗಳು ಮನುಷ್ಯನ ಕೈಯಲ್ಲಿ ಪಳಗಿ ಕೃಷಿಗೆ ಒಗ್ಗಿಕೊಂಡವು. ಅವರು ಹೋದಲ್ಲೆಲ್ಲಾ ತಾವೂ ಪ್ರಯಾಣಿಸಿದವು. ಕೃಷಿ ಮಾಡಲು ಶುರುಮಾಡಿದ ಮನುಷ್ಯನಿಗೆ ತನ್ನೊಬ್ಬನಿಂದಲೇ ನೆಲ ಹಸನು ಮಾಡಿ, ಉತ್ತಿ, ಬಿತ್ತಿ, ಕಳೆ ತೆಗೆದು, ಸಾಗಣೆ ಮಾಡುವ ಕೆಲಸ ಆಗದು ಎಂದು ಅರಿವಾದಾಗ ಕಾಡಲ್ಲಿದ್ದ ಎಮ್ಮೆ, ಕುದುರೆ ಇತ್ಯಾದಿ ಕಂಡವು. ಅವುಗಳನ್ನು ಹಿಡಿದು ಪಳಗಿಸಿ ಕೃಷಿ ಕೆಲಸಕ್ಕೆ ಹಚ್ಚಿದ. ಹೀಗೆ ಜಾನುವಾರು ಸಾಕಣೆ ಆರಂಭವಾಯಿತು. ಅವುಗಳನ್ನು ಹಾಲಿಗಾಗಿಯೂ, ಆಹಾರವಾಗಿಯೂ ಬಳಸುವುದು ಶುರುವಾಯಿತು. ಅದೊಂದು ಬೇರೆಯೇ ಕಥೆ.

ಸದ್ಯಕ್ಕೆ ಸಿರಿಧಾನ್ಯಗಳ ಬಗ್ಗೆ ಗಮನಹರಿಸುವುದಾದರೆ:

ಇವುಗಳ ಸಾಮಾನ್ಯ ಹೆಸರು 'ಮೈನರ್ ಮಿಲ್ಲೆಟ್'. ಕನ್ನಡದಲ್ಲಿ 'ಕಿರು ಧಾನ್ಯ' ಎನ್ನಬಹುದು. ಹೆಸರಿಗೆ ತಕ್ಕಂತೆ ಸಣ್ಣ ಗಾತ್ರದ ಕಾಳುಗಳು. ಕೆಲವಂತೂ ಗುಂಡುಸೂಜಿಯ ಮೊನೆಯಷ್ಟು. ನೋಡಲು ಹೀಗೆ ಪುಟ್ಟದಾಗಿ ಕಾಣುವ ಇವುಗಳ ಇತಿಹಾಸ ಮಾತ್ರ ಬಹು ವಿಸ್ತಾರವಾದುದು ಹಾಗೂ ಸುದೀರ್ಘ.

ಈಗಾಗಲೇ ಹೇಳಿದಂತೆ, ಹತ್ತು ಸಾವಿರ ವರ್ಷಗಳಿಂದ ಈ ಧಾನ್ಯಗಳನ್ನು ಬೆಳೆಯಲಾಗುತ್ತಿದೆ. ಯಾವುದೋ ಗುಹೆಯಲ್ಲಿ ಯಾರೋ ಹೆಣ್ಣುಮಗಳು ಬಿತ್ತಲಾರಂಭಿಸಿದ ಈ ಕಾಳುಗಳು ಎಲ್ಲೋ ಹುಟ್ಟಿ ಮತ್ತೆಲ್ಲಿಗೋ ಬಂದಿವೆ. ಸಾವಿರಾರು ಮೈಲಿಗಳನ್ನು ಕ್ರಮಿಸಿವೆ. ಖಂಡಗಳನ್ನು ದಾಟಿವೆ. ನದಿ, ಸಮುದ್ರ, ಗುಡ್ಡಗಾಡುಗಳು, ಬೆಟ್ಟ ಸಾಲುಗಳು, ಪರ್ವತಗಳು, ಹಿಮಗಡ್ಡೆಗಳನ್ನು ಹಾದುಬಂದಿವೆ. ಇದೊಂದು ರೋಚಕ ಮಹಾಪಯಣ.

ಶಿಲಾಯುಗ, ಮಡಕೆ ಯುಗ, ಕಂಚಿನ ಯುಗ, ಕಬ್ಬಿಣದ ಯುಗಗಳನ್ನು ಕಂಡಿವೆ. ಇಂದಿನ ಆಧುನಿಕ ಯುಗದಲ್ಲೂ ಇವೆ, ಖಂಡಿತವಾಗಿ ಮುಂದೆಯೂ ಇರಲಿವೆ. ನೂರಾರು ಬರಗಾಲ, ಕಾಡ್ಗಿಚ್ಚು, ಹಿಮಪಾತಗಳನ್ನು ಎದುರಿಸಿ ಗೆದ್ದು ಬಂದಿರುವುದು ಇವುಗಳ ವಿಶೇಷ.

ಭಾರತದಲ್ಲಿ ಒಂಬತ್ತು ಸಿರಿಧಾನ್ಯಗಳು ಪ್ರಚಲಿತ. ರಾಗಿ, ಜೋಳ, ಸಜ್ಜೆ, ಹಾರಕ, ಸಾವೆ, ನವಣೆ, ಊದಲು, ಬರಗು ಮತ್ತು ಕೊರಲೆ. ಈಶಾನ್ಯ ಭಾರತದ ಗುಡ್ಡಗಾಡುಗಳಲ್ಲಿ 'ಜಾಬ್ಸ್ ಟಿಯರ್ಸ್' ಎಂಬ ಸಿರಿಧಾನ್ಯ ಬೆಳೆಯಲ್ಪಡುತ್ತದೆ. ಅದೂ ಸೇರಿದರೆ ಇವುಗಳ ಸಂಖ್ಯೆ ಹತ್ತು. ಇತ್ತೀಚಿನ ವರ್ಷಗಳಲ್ಲಿ 'ಚಿಯಾ', 'ಕಿನೋ' ಹೆಸರಿನ ಆಫ್ರಿಕಾದ ಸಿರಿಧಾನ್ಯಗಳೂ ಭಾರತದಲ್ಲಿ ಜನಪ್ರಿಯವಾಗುತ್ತಿವೆ.

## ಹುಟ್ಟು ಮತ್ತು ಪ್ರಯಾಣ

ಬಹುತೇಕ ಸಿರಿಧಾನ್ಯಗಳ ಮೂಲ ಏಷ್ಯಾ ಮತ್ತು ಆಫ್ರಿಕಾ ಖಂಡಗಳು. ಅಲ್ಲಿಂದ ಕ್ರಮೇಣ ಪ್ರಪಂಚದ ಇತರ ಪ್ರದೇಶಗಳಿಗೆ ಪಸರಿಸಿವೆ.

'ಬರಗು' (ಕಾಮನ್ ಮಿಲ್ಲೆಟ್) ಮಾನವ ಬಳಸಿದ ಮೊದಲ ಸಿರಿಧಾನ್ಯ ಎನ್ನುತ್ತವೆ ಅಧ್ಯಯನಗಳು. ಮಧ್ಯ ಅಥವಾ ಪೂರ್ವ ಏಷ್ಯಾ ಇದರ ಮೂಲ. ಮಂಗೋಲಿಯಾ, ಚೀನಾ ಮತ್ತು ಪೂರ್ವ ಏಷ್ಯಾದಲ್ಲಿ ಇದರ ತಳಿ ವೈವಿಧ್ಯ ಅಪಾರವಾಗಿದೆ. ಚೀನಾದ ಹಳದಿ ನದಿ ಬಯಲು ಇದರ ಹುಟ್ಟು ಸ್ಥಳ ಎಂದೂ ಹೇಳಲಾಗುತ್ತದೆ.

ಜೋಳವು ಈಶಾನ್ಯ ಆಫ್ರಿಕಾದಲ್ಲಿ ಹುಟ್ಟಿ, ಕ್ರಿ.ಪೂ. 5000–8000 ವರ್ಷಗಳ ಹಿಂದೆ ಕೃಷಿಗೆ ಅಳವಡಿಕೆಗೊಂಡಿತು. ಇಂದಿಗೂ ಆಫ್ರಿಕಾದಲ್ಲಿ ಕಾಡು ಜೋಳದ ತಳಿಗಳ ಅಪಾರ ವೈವಿಧ್ಯ ಕಂಡುಬರುತ್ತದೆ. ಅಲ್ಲಿ ಹೊರತುಪಡಿಸಿ ಹೆಚ್ಚು ವೈವಿಧ್ಯ ಇರುವುದು ಭಾರತದಲ್ಲಿ. ಜೋಳದ ಕೃಷಿಗೆ ಸುಮಾರು 4500 ವರ್ಷಗಳ ಲಿಖಿತ ಪುರಾವೆಗಳಿವೆ.

ಸಜ್ಜೆಯು ಉತ್ತರ–ಮಧ್ಯ ಸಹೇಲಿಯನ್ ಆಫ್ರಿಕಾ ಮೂಲದ್ದು. ಕ್ರಿ.ಪೂ. 4500ರಲ್ಲಿ ಕೃಷಿ ಮಾಡಲು ಆರಂಭವಾಗಿ ಈಗಲೂ ಆಫ್ರಿಕಾದ ಪ್ರಮುಖ ಬೆಳೆಯಾಗಿಯೇ ಉಳಿದಿದೆ. ಪೂರ್ವ ಮತ್ತು ದಕ್ಷಿಣ ಆಫ್ರಿಕಾ ಮತ್ತು ಭಾರತದ ಒಣ ಭೂಮಿ ಪ್ರದೇಶಗಳಲ್ಲಿ ಸಜ್ಜೆಯನ್ನು ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಕ್ರಿ.ಪೂ. 2500ರಲ್ಲಿ ಸಜ್ಜೆ ಕೃಷಿಯ ಕುರಿತು ಅತ್ಯಂತ ಹಳೆಯ ಪುರಾತತ್ವ



ಪುರಾತನ ಕಾಲದ 'ಬ್ರೂಮ್ ಮಿಲ್ಲೆಟ್' ಕೃಷಿ